3 ಪ್ರೆಸಿಡೆಂಟ್ ಸಾಹೇಬರವರು ಏನೊಂದು ಕಾರಣವೂ ಇಲ್ಲದೇನೆ ಜಾಸ್ತಿ ಅಥವಾ ಯಾವ ಸವಾಲನ್ನಾಗಲಿ ಅಂಗೀಕರಿಸತಕ್ಕ ಯಾ ತಿರಸ್ಕರಿಸತಕ್ಕ ಅಧಿಕಾರವನ್ನು ಹೊಂದಿರುತ್ತಾರೆ.

4. ಕಂಟ್ರಾಕ್ಟು ಮೊಬಲಗನ್ನು ಹನ್ನೆರಡು ತಿಂಗಳಲ್ಲಿ ಸಮಭಾಗವಾಗಿ ಕೊಡತಕ್ಕದ್ದು. ಆಯಾಯ ಖಿಸ್ತಿನ ಮೊಬಲಗನ್ನು ಮೂರನೇ ತಿಂಗಳು 10ನೆ ತಾರೀಖಿನೊಳಗಾಗಿ ಯಾ ಅದಕ್ಕೆ ಮುಂಚಿತವಾಗಿಯೇ ಪಾವತಿ ಮಾಡಬೇಕು. ಹರಾಜು ಬೈದಾದಕೂಡ್ಲೆ ಆಖೈರು ಸವಾಲುದಾರನು ತನ್ನ ಕಂಟ್ರಾಕ್ಟನ್ನು ಕ್ರಮವಾಗಿ ನೆರವೇರಿಸತಕ್ಕ ಬಗ್ಗೆ ಎರಡು ತಿಂಗಳ ಖಿಸ್ತು ಮೊಬಲಗನ್ನು ತೇವಣಿ ಇಡಬೇಕು, ಮತ್ತು ಕಂಟ್ರಾಕ್ಟುದಾರನು ಪ್ರತಿ ತಿಂಗಳ ಖಿಸ್ತು ಮೊಬಲಗು ಸರಿಯಾಗಿ ಪಾವತಿ ಮಾಡುವದರ ಖಾತ್ರಿಗಾಗಿ ಲಾಯಕ್ಕು ಜಾಮೀನನ್ನು ಕೊಡಬೇಕು.

5. ಹರಾಜು ಬೈದಾದ ಕೂಡ್ಲೆ ಡಿಪಾಜಿಟ್ಟು ಹಾಜರ್ಮಾಡದೆ ಇದ್ದಲ್ಲಿ ಆಗಲೆ ಮತ್ತು ಸರಿಯಾದ ಜಾಮೀನು ಕೊಡದೇ ಹೋದಲ್ಲಿ ಆಗಲಿ ಎರಡನೇ ಹರಾಜು ಮಾಡಿಸಲ್ಪಡುತ್ತೆ. ಈ ಹರಾಜಿನಲ್ಲಿ ಉಂಟಾಗತಕ್ಕ ನಷ್ಟವನ್ನು ಅವಲ್ ಹರಾಜುದಾರನನ್ನು ಗುರಿಪಡಿಸುತ್ತೆ. ಕ್ರಮವಾಗಿ ಮೊಬಲಗು ಪಾವತಿಯಾಗದೆ ಹೋದಲ್ಲಿ ಮೊಬಲಗು ಪಾವತಿಯಾಗುವ ತಾರೀಖಿನ ವರಿಗೂ ಮಾಹೇಯಾನ ರೂಪಾಯಿ ಬಂದಕ್ಕೆ ಬಂದು ಪೈ ನಂತೆ ೬ ಡ್ಡಿ ವಸೂಲ್ಮಾಡಲ್ಪಡುತ್ತೆ. ನಂತರ ಬಾಕಿ ಮೊಬಲಗು ಯೇನಾದರೂ ಇದ್ದರೆ ಕಂಟ್ರಾಕ್ಟುದಾರನಿಂದ ಆಗಲಿ ಯಾ ಜಾಮೀನುದಾರನಿಂದಾಗಲಿ ವಸೂಲಾಗತಕ್ಕದ್ದು.

6. ಕಂಟ್ರಾಕ್ಟುದಾರನು ಪ್ರತಿ ಒಬ್ಬ ಗಾಡಿದಾರನಿಗೂ ಯಾ ಎತ್ತಿನ ಯಾ ಕತ್ತೆಗಳ ಮಾಲೀಕನಿಗೂ ಹಾಸಲು ವಸೂಲಾದ ತಾರೀಖು ನಮೂದಿನಿಂದ ಒಂದು ತೀರುವಳಿ ರಸೀತಿ ಕೊಡಬೇಕು ಅಲ್ಲದೆ ಕಂಟ್ರಾಕ್ಟುದಾರನು ಕ್ರಮವಾಗಿ ಹಾಸಲು ವಸೂಲ್ಮಾಡತಕ್ಕ ತಪಶೀಲು ಲೆಕ್ಕವನ್ನು ಇಡಲು ಬದ್ಧನಾಗಿರತಕ್ಕದ್ದು. ಸದರಿ ಲೆಕ್ಕವು ಪ್ರೆಸಿಡೆಂಟ್ ವೈಸ್ ಪ್ರೆಸಿಡೆಂಟ್ ಸಾಹೇಬರವರುಗಳು ಮತ್ತು ಮ್ಯುನಿಸಿಪಲ್ ಮೆಂಬರುಗಳ ಇನ್ಸ್ಪೆಕ್ಷನ್ನಿಗೆ ಒಳಪಟ್ಟಿರತಕ್ಕದ್ದು.

7. ಯಾವಾಗಲಾಗಲಿ ಕಂಟ್ರಾಕ್ಟುದಾರನು ವಿಧಾಯಕವಾಗಿರುವ ದರಕ್ಕಿಂತಲು ಜಾಸ್ತಿ ಯಾದ ಹಾಸಲು ಕೇಳಿ ಯಾ ವಸೂಲ್ಮಾಡಿ ಯಾ ಟವರ್ ಮಾರ್ಗವಾಗಿ ದರಕನ್ನು ಬೆಕರಿ ಮಾಡದೆ ಹೋಗತಕ್ಕ ಛತ್ರಿ ಗಾಡಿ, ಎತ್ತು ಯಾ ಕತ್ತೆಗಳ ಮೇಲೆ ಸುಂಕ ಕೇಳಿದ ಸಂಗತಿಗಳು ಪ್ರೆಸಿಡೆಂಟ್ ಸಾಹೇಬರವರಿಗೆ ತೃಪ್ತಿಕರವಾಗುವಂತೆ ರುಜುವಾತಾದಲ್ಲಿ ಕಂಟ್ರಾಕ್ಟುದಾರನಿಂದ ತೇವಣಿ ಹಾಜರ್ಮಾಡಲ್ಪಟ್ಟ ಎರಡು ತಿಂಗಳ ಖಿಸ್ತು ಮೊಬಲಗು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತಲ್ಲದೆ ಕೂಡ್ಲೆ ಕಂಟ್ರಾಕ್ಟು ಕ್ಯಾನಸಲ್ ಮಾಡಲ್ಪಡುತ್ತೆ.

ಷೆಡ್ಯೂಲ್.

				ರೂ.	ಆ.	ಪೈ.
1.	ಪ್ರತಿ ಛತ್ರಿ ಗಾಡಿ	...	...	 0	2	0
2.	ಡಿಟೋ ಎತ್ತು	...	...	... 0	0	6
3.	ಡಿಟೋ ಕತ್ತೆ	...	...	... 0	0	6

ಡಿ. ಶ್ರೀನಿವಾಸ್ಯೆಯ್ಯಂಗಾರ್,
ಫಾರ್ ಪ್ರೆಸಿಡೆಂಟ್

ಮೈಸೂರ್ ಜೈಲ್.

ತಾರೀಖು 29ನೆ ಮೇ 1909ನೆ ಇಸವಿ.

ಇದರಿಂದ ತಿಳಿಯಪಡಿಸುವದೇನಂದರೆ,—ಮೈಸೂರು ಜೈಲಿನಲ್ಲಿ ಖೈದು ಮಾಡಲ್ಪಟ್ಟಿರುವ ಖೈದಿಗಳ ಉಪಯೋಗದ ಬಗ್ಗೆ ಸ 1909ನೆ ಇಸವಿ ಜುಲೈ ಗುರಿ ಲಾಗಾಯತು 1910ನೆ ಇಸವಿ ಜೂ. 30ನೆ ತಾರೀಖಿನ ವರಿಗೆ (ಆ ಎರಡು ದಿನಗಳೂ ಸೇರಿ) ಕೆಳಗೆ ನಮೂದು ಮಾಡುವ ಜಿನಸು ವಗೈರೆಗಳನ್ನು ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಗೆ ಬರುವ ಮೊಹರ್ಮಾಡಲ್ಪಟ್ಟ ದರಖಾಸ್ತುಗಳನ್ನು ಮೈಸೂರು ಜೈಲ್ ಸೂಪರ್ಟೆಂಡೆಂಟರವರಿಂದ, ಸ 1909ನೆ ಇಸವಿ ಜೂ 19ನೆ ಶನಿವಾರ ಹಗಲು 9 ಘಂಟೆ ವರಿಗೆ ತೆಗೆದುಕೊಳ್ಳಲ್ಪಡುವದು.

(2) ಮೇಲೆ ನಮೂದು ಮಾಡುವ ತಾರೀಖಿನ ನಂತರ ಯಾವ ದರಖಾಸ್ತುಗಳು ತೆಗೆದುಕೊಳ್ಳಲ್ಪಡುವದಿಲ್ಲಾ.

(3) ದರಖಾಸ್ತುಗಳೊಡನೆ 500 ರೂಪಾಯಿ ತೇವಣಾತಿ ಮೊಬಲಗನ್ನು ಹಾಜರು ಮಾಡಬೇಕು.

(4) ಈ ಮೇರಿಗೆ ನಗದಾಗಲಿ, ಕರೆನ್ಸಿ ನೋಟಾಗಲಿ ತೇವಣಾತಿ ಮೊಬಲಗು ಇಲ್ಲದೆ ಬರುವ ದರಖಾಸ್ತುಗಳು ಅಂಗೀಕರಿಸಲ್ಪಡುವದಿಲ್ಲ.

(5) ದರಖಾಸ್ತುಗಳು ಮೈಸೂರು ಜೈಲ್ ಸೂಪರ್ಟೆಂಡೆಂಟರವರಿಂದ ಅವರ ಆಫೀಸಿನಲ್ಲಿ ಹಾಜರಾಗಲಿಕ್ಕೆ ಇಷ್ಟವುಳ್ಳ ದರಖಾಸ್ತುದಾರುಗಳ ರೂಬರೂನ ಮೇಲ್ಕಂಡ ತಾರೀಖಿನಲ್ಲಿ ಖುಲ್ಲಾ ಮಾಡಲ್ಪಡುವದು.

(6) ದರಖಾಸ್ತುಗಳಲ್ಲಿ ಕೆಳಗೆ ವಿವರಿಸುವ ಸರಬರಾಯಿ ಆಗುವ ಜಿನಸಿಗಳ ದರ ರೂಪಾಯಿ ಬಂದಕ್ಕೆ ಇಷ್ಟು ಪೌಂಡು ಯಂತ ನಮೂದಾಗಬೇಕು, ಮತ್ತು ಜಿನಸಿಗಳು ಒಳ್ಳೇದಾಗಿರಬೇಕು. ಹಾಲಿಗೆ ಮಾತ್ರ ರೂಪಾಯಿ ಬಂದಕ್ಕೆ ಇಷ್ಟು ಪೈಂಟ್ ಎಂದು ನಮೂದಿರಬೇಕು.

ಬಂದು ವರುಷಕ್ಕೆ ಬೇಕಾದ ಜಿನಸಿಗಳ ಪಟ್ಟಿ.

	ಸುಮಾರು ಎಷ್ಟು ಪೌಂಡು ಬೇಕಾದ್ದು.		ಸುಮಾರು ಎಷ್ಟು ಪೌಂಡು ಬೇಕಾದ್ದು.
ಅಕ್ಕಿ (ಕುಸಲಕ್ಕಿ ಮತ್ತು ಬೆಣತಕ್ಕಿ)	20,000	ತುಪ್ಪ (ಅವಲ್ ಥರಹಾ)	20
ರಾಗಿ (ಅವಲ್ ಥರಹಾ) ...	80,000	ಬಳ್ಳೆಂಣೆ ...	2,000
ತೊಗರಿಬೇಳೆ ಡಿಟೋ	12,000	ತರಕಾರಿ ...	23,000
ಅವರೆಬೇಳೆ ಡಿಟೋ ...	18,000	ಬೆಣಗಿದ ಸೌದೆ ...	80,000
ಖಾರದ ಸಾಮಾನು ಯಾ ಪುಡಿ (ಬೆಣಸಿನ ಪುಡಿ)	1,000	ಸಕ್ಕೆ)	600
ಉಪ್ಪು	2,000	ರವೆ ...	700
ಈರುಳ್ಳಿ	2,000	ರೊಟ್ಟಿ ...	300
ಬೆಳ್ಳುಳ್ಳಿ	20	ಹಾಲು	8,000 ಪೈಂಟುಗಳು.
ಹುಣಸೆಹಣ್ಣು	2,000	ಮೊಸರು	100 (ಪೌಂಡು)
		ಮೂಳೆ ಇಲ್ಲದ ಮಾಂಸ	100 ಪೌಂಡು.

ಮೇಲೆ ನಮೂದು ಮಾಡಿರುವ ಜಿನಸಿನ ಪೊತ್ತಗಳು ಇಷ್ಟೇ ತೆಗೆದುಕೊಳ್ಳುತ್ತೇವೆಂದು ಖಾತರಿ ದೊರೆಯಲಾರದು.

(7) ಕಂಟ್ರಾಕ್ಟ್‌ದಾರನು ಖೈದಿಗಳಿಂದ ಬೀಸಲ್ಪಡುವದಕ್ಕೆ ರಾಗಿ ಸರಬರಾಯಿ ಮಾಡಬೇಕು. ಹಾಗೆ ತಯಾರಾದ ಹಿಟ್ಟನ್ನು ಖೈದಿಗಳಿಗೆ ಕೊಡಲ್ಪಡುವದು, ಹಾಗೆ ಸರಬರಾಯಿ ಮಾಡಲ್ಪಟ್ಟಂಥಾ ಹಿಟ್ಟಿನ ವೊತ್ತಕ್ಕೆ ರಾಗಿ ಬಗ್ಯೆ ದಾಖಲಾಗಿರುವ ದರದಂತೆ ಖರೀದಿ ಕೊಡೋಣಾದೀತು.

(8) ಸೂಪರ್‌ಟೆಂಡೆಂಟರವರು ಅತ್ಯಂತ ಕಮ್ಮಿ ದರದ ಅಥವಾ ಇತರ ದರಖಾಸ್ತನ್ನು ಒಪ್ಪಿಕೊಳ್ಳುವದಕ್ಕೆ ಕಾರಣ ಹೇಳಲು ಬದ್ಧರಾಗಿರುವದಿಲ್ಲ.

(9) ಮಂಜೂರಾದ ದರಖಾಸ್ತುದಾರರ ತೇವಣಿ ವೊಬಲಗು ಇಟ್ಟುಕೊಳ್ಳಲ್ಪಡುವದು. ಮತ್ತು ಅವರ ದರಖಾಸ್ತು ಮಂಜೂರಾದ ಸಂಗತಿ ಅವರಿಗೆ ತಿಳಿಸಲಾದೀತು. ಆ ಲಾಗಾಯ್ತು ಒಂದು ವಾರದೊಳಗೆ ಅವರು ಸೂಪರ್‌ಟೆಂಡೆಂಟರವರ ಆಫೀಸಿನಲ್ಲಿ ತೋರಿಸುವ ನಮೂನೆ ಪೇರೆ ಕಂಟ್ರಾಕ್ಟು ಮುಚ್ಚಳಿಕೆ ಬರದುಕೊಡುವುದಕ್ಕೆ ತಪ್ಪಿದರೆ ಆಗಲಿ ಅಥವಾ ನಗದಾಗಲಿ ಗವರ್ನ್‌ಮೆಂಟ್ ಬಾಂಡ್ ಮೂಲಕ ಆಗಲಿ 50 ರೂಪಾಯಿಗೆ ಜಾಮೀನ್ ಕೊಡುವದಕ್ಕೆ ತಪ್ಪಿದರೆ ಅಂಥಾ ತೇವಣೀ ವೊಬಲಗು ದಂಡವಾಗಿ ತೆಗೆದುಕೊಳ್ಳಲ್ಪಡುವದು.

(10) ಜಿನಸಿಗಳನ್ನು ಒಂದು ವರ್ಷ ಪೂರ್ತಿಯಾಗಿ ಸರಬರಾಯಿ ಮಾಡತಕ್ಕ ಷರತ್ತಿಗೆ ಈ ಕಂಟ್ರಾಕ್ಟು ಬಳಪಟ್ಟರುತ್ತೆ. ಸದರೀ ವರ್ಷ ಪೂರ್ತಿಯಾಗಲೇನೆ ಸರಬರಾಯಿ ಆದ ಜಿನಸಿಗಳ ಕಿಮ್ಮತ್ತಿನ ಲೆಖ್ಖವನ್ನು ಝಾಡಿಯಾಗಿ ವ್ಯವಸ್ಥೆ ಮಾಡಲಾಗುವದು. ಈ ವುದ್ದೇ ತೊಂದರೆ ಇಲ್ಲದೆ ಸರಬರಾಯಿ ನಡಿಯುವ ಉದ್ದಿಶ್ಯ ಪ್ರತಿ ತಿಂಗಳ ಆಖೈರಿನಲ್ಲಿಯೂ ಆ ತಿಂಗಳಲ್ಲಿ ಸರಬರಾಯಿ ಮಾಡಿರುವ ಜಿನಸಿಗಳ ಬೆಲೆ ಬಾಳುವಷ್ಟು ವೊಬಲಗು ಅಡ್ವಾನ್ಸಾಗಿ ಕಂಟ್ರಾಕ್ಟುದಾರನಿಗೆ ಕೊಡಲ್ಪಡುತ್ತೆಯಾದ್ದರಿಂದ ಆ ಕಾಲಕ್ಕೆ ಸರಿಯಾಗಿ ಜೈಲು ಸೂಪರ್‌ಟೆಂಡೆಂಟರವರ ರೂಬರೂಬು ತಾನು ಸರಬರಾಯಿ ಮಾಡಿದ ಜಿನಸಿಗಳ ಕಿಮ್ಮತ್ತಿನ ಬಿಲ್ಲನ್ನು ವೌಚರ್‌ಗಳ ಸಮೇತ ಹಾಜರು ಮಾಡಿ ರಶೀತಿ ಕೊಟ್ಟು ಅಡ್ವಾನ್ಸನ್ನು ಪಡಿಯಬೇಕು.

(11) ಉಗ್ರಾಣದ ಕೊಠಡಿಗಳು ಕಂಟ್ರಾಕ್ಟುದಾರರ ಸ್ವಾಧೀನಕ್ಕೆ ಕೊಡಲ್ಪಡುವವು. ಅವುಗಳಲ್ಲಿ ಅವರು ಕೆಟ್ಟುಹೋಗದೆ ಇರತಕ್ಕ ಎಲ್ಲಾ ಜಿನಸುಗಳನ್ನು ಒಂದು ತಿಂಗಳ ಸರಬರಾಯಿಗೆ ಕಮ್ಮಿ ಇಲ್ಲದಂತೆ ಯಾವಾಗಲು ಇಟ್ಟಿರಬೇಕು. ಕೆಟ್ಟು ಹೋಗತಕ್ಕಂಥಾ ಪದಾರ್ಥಗಳು ಅಂದರೆ, ತರಕಾರಿ ಮುಂತಾದ್ದು ಪ್ರತಿದಿನವು ಬೆಳಿಗ್ಯೆ 7 ಘಂಟೆಗೆ ಸರಿಯಾಗಿ ಜೈಲ್‌ನಲ್ಲಿ ಹಾಜರ್ಮಾಡಬೇಕು.

(12) ಈ ಕಂಟ್ರಾಕ್ಟನ್ನು ಬಳಗುತ್ತಿಗೆಯಾಗಿ ಕೊಡಬಾರದು.

(13) ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮುಚ್ಚಳಿಕೆಯ ಷರತ್ತಿಗೆ ತಪ್ಪು ನಡೆದರೂ ಮತ್ತು ನಾಲಾಯಖಾದ ಸಾಮಾನನ್ನು ಸರಬರಾಯಿ ಮಾಡಿದರೂ, ಮೈಸೂರ್ ಜೈಲ್ ಸೂಪರ್‌ಟೆಂಡೆಂಟರವರು ಅವರ ಯುಕ್ತಾನುಸಾರ 50 ರೂಪಾಯಿಗೆ ವಿೂರದ ಜುಲ್ಮಾನೆ ಹಾಕುವನು. ಮತ್ತು ಪದೇಪದೆ ಆ ಮುಚ್ಚಳಿಕೆ ಷರತ್ತಿಗೆ ತಪ್ಪಿ ನಡೆದರೆ ಆ ಕಂಟ್ರಾಕ್ಟು ರದ್ದುಮಾಡಿ ತೇವಣೀ ವೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಟ್ಟೀತು.

(14) ಮುಚ್ಚಳಿಕೆ ಷರತ್ತಿಗೆ ತಪ್ಪಿ ನಡೆದ ಎಲ್ಲಾ ಪ್ರಮೇಯಗಳಲ್ಲೂ ಮೈಸೂರ್ ಜೈಲ್ ಸೂಪರ್‌ಟೆಂಡೆಂಟರವರಿಂದ ಮಾಡಲ್ಪಟ್ಟು ಫೈಸಲ್ ಆಖೈರಾಗಿರತಕ್ಕದ್ದು.

(15) ಜೈಲ್ ತೋಟದಲ್ಲಿ ಬೆಳಿಯತಕ್ಕ ತರಕಾರಿಯನ್ನು ಖೈದಿಗಳ ಉಪಯೋಗಕ್ಕಾಗಿ ತೆಗದುಕೊಳ್ಳಬೇಕೆಂತ ಅಪೇಕ್ಷಿಸಿದ ಪಕ್ಷದಲ್ಲಿ ಕಂಟ್ರಾಕ್ಟುದಾರನು ಮುಚ್ಚಳಿಕೆಯಲ್ಲಿ ನಮೂದಾಗುವ ದರದಂತೆ ತೆಗದುಕೊಳ್ಳಲು ಬದ್ಧನಾಗಿರಬೇಕು.

(16) ಈ ವಿಷಯವಾಗಿ ಇನ್ನೇನಾದರೂ ಹೆಚ್ಚು ವರ್ತಮಾನ ಅಗತ್ಯವಾದಲ್ಲಿ ಸೂಪರ್‌ಟೆಂಡೆಂಟರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

(17) ಕಂಟ್ರಾಕ್ಟುಗಳು ಮೈಸೂರು ಸಂಸ್ಥಾನದ ಜೈಲುಗಳ ಇನ್‌ಸ್ಪೆಕ್ಟರ್ ಜನರಲ್‌ರವರ ಮುಂಜೂರಾತಿಗೆ ಬಳಪಟ್ಟಿರಬೇಕು.

(18) ಕಂಟ್ರಾಕ್ಟುದಾರನು ಈ ಕಂಟ್ರಾಕ್ಟು ತೆಗದುಕೊಂಡ ತರುವಾಯ, ತಮ್ಮ ಕರಾರುಮೇರಿಗೆ ನಡೆಯಲು ಇಷ್ಟೆಟ್ಟಿಲ್ಲದಿದ್ದರೆ, ಅವನು ಕೊನೇಪಕ್ಷ ಒಂದು ತಿಂಗಳ ಮುಂಚಿತವಾಗಿ ನೋಟೀಸು ಕೊಟ್ಟು ತನ್ನ ತೇವಣಾತಿ ವೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಬಿಟ್ಟುಬಿಡಬೇಕು.

(19) ಅಲ್ಲದೆ ಆಪ್ರಕಾರ ನದರಿ ಕಂಟ್ರಾಕ್ಟುದಾರನು ತನ್ನ ಖರಾರಿಗೆ ತಪ್ಪಿದ್ದರಿಂದ ಅಥವಾ ತನ್ನ ಮುಚ್ಚಳಿಕೆಯಲ್ಲಿ ನಮೂದಾಗುವ ಪದಾರ್ಥಗಳನ್ನು ಸರ್ಕಾರದವರು, ಸ್ಥಳೀಯವಾದ ಬಜಾರಿನಲ್ಲಿ ಮುಚ್ಚಳಿಕೆ ದರಕ್ಕಿಂತಲೂ ಹೆಚ್ಚು ದರ ಕೊಟ್ಟು ತಕ್ಕೊಳ್ಳುವದ್ದರಿಂದ ಸರ್ಕಾರಕ್ಕೆ ಉಂಟಾಗಬಹುದಾದ ನಷ್ಟವನ್ನು ಭರ್ತಿ ಮಾಡುವದಕ್ಕೂ ಸಹ ಬದ್ಧನಾಗಿರಬೇಕು.

ಷರಾ.—ಈ ಕಂಟ್ರಾಕ್ಟಿನಲ್ಲಿ ಯಾವ ವಿಧವಾದ ರಿಯಾಯತಿಯನ್ನು ಮಾಡೋಣಾಗಲಾರದು.

ಟಿ. ಎಸ್. ನಂಜಪ್ಪ, ಸೂಪರ್‌ಟೆಂಡೆಂಟ್.

ಮೈಸೂರು ಗವರ್ನಮೆಂಟು ಕೋ ಆಪರೇಟೀವ್ ಸೊಸೈಟಿಗಳ ರಿಜಿಸ್ಟ್ರಾರ್‌ರವರ ಆಫೀಸಿನಿಂದ.

ನೋಟಿಫಿಕೇಷನ್ ನಂಬರ್ 812—C. S.-24.

ಮೊಕ್ಕಾಂ ಬೆಂಗಳೂರು, ತಾರೀಖು 25—26ನೆ ಮೇ 1909.

ಈ ಕೆಳಗೆ ನಮೂದಿಸಿರುವ ಕೋ ಆಪರೇಟೀವ್ ಸೊಸೈಟಿಗಳು 1905ನೆ ಇಸವಿಯ ಮೈಸೂರು ಕೋ ಆಪರೇಟೀವ್ ಸೊಸೈಟಿಗಳ ರೆಗ್ಯುಲೇಷನ್ 6ನೆ ಸೆಕ್ಷನ್ 2ನೆ ಒಳ ಪ್ರಕರಣಕ್ಕನುಸಾರವಾಗಿ ರಿಜಿಸ್ಟರು ಮಾಡಲ್ಪಟ್ಟಿರುತ್ತವೆ :—

ಹೆಸರು.	ಸ್ಥಳ.	ರಿಜಿಸ್ಟರಾದ ತಾರೀಖು.
1. ಚನ್ನಪಟ್ಟಣ ಕೋ ಆಪರೇಟೀವ್ ಸೊಸೈಟಿ ಲಿಮಿಟೆಡ್.	ಚನ್ನಪಟ್ಟಣ ...	4ನೆ ಮೇ 1909.
2. ತುರುವೇಕೆರೆ ಕೋ ಆಪರೇಟೀವ್ ಸೊಸೈಟಿ ಲಿಮಿಟೆಡ್.	ತುರುವೇಕೆರೆ ...	7ನೆ ಮೇ 1909.

ಎಂ. ಶಾಮರಾವ್, ಮೈಸೂರು ಗವರ್ನಮೆಂಟ್ ಕೋ ಆಪರೇಟೀವ್ ಸೊಸೈಟಿಗಳ ರಿಜಿಸ್ಟ್ರಾರ್.